**ಓ ಎಸ್ ನಂಃ 418-14**
**ಪಿ ಡಬ್ಲ್ಯೂ ಃ 2**

**ದಿಃ 05-03-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಸ್ ಆರ್ ವಕೀಲರಿಂದ**

ನಾನು ನಿಪಿ 5 ದತ್ತುಪತ್ರದ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ನಿಪಿ 5 ದತ್ತು ಪತ್ರದ ಮೂಲ ಪ್ರತಿ 7ನೇ ಪ್ರತಿವಾದಿ ಮಂಜುಶ್ರೀಶೈಲ್ ರವರ ಕಡೆ ಇರುತ್ತದೆ ಎಂದು ಹೇಳುತ್ತಾರೆ. ದತ್ತುಪತ್ರದ ಮೂಲ ಪ್ರತಿ ನಮ್ಮ ಕಡೆ ಇರುವುದಿಲ್ಲ ಎಂದು 2013ರಲ್ಲಿ ನನ್ನ ಸಂರಕ್ಷಕರಾದ ಅಮರೇಶ್ ರವರು ಹೇಳಿದ ನಂತರ ಗೊತ್ತಾಗಿರುತ್ತದೆ. ಮೂಲ ದತ್ತು ಪತ್ರವನ್ನು ಹಾಜರುಪಡಿಸಬೇಕೆಂದು ನಾನು 7ನೇ ಪ್ರತಿವಾದಿಗೆ ನೋಟಿಸ್ ಕೊಟ್ಟಿಲ್ಲ, ನನ್ನ ತಂದೆ ಅಮರೇಶ್ ರವರು ನೋಟಿಸ್ ಕೊಟ್ಟಿರುತ್ತಾರೋ ಇಲ್ಲವೋ ಗೊತ್ತಿಲ್ಲ. ದತ್ತು ಪತ್ರದ ಮೂಲ ಪ್ರತಿ 7ನೇ ಪ್ರತಿವಾದಿಯ ಕಡೆ ಇದೆ ಎಂದು ನನ್ನ ಸಂರಕ್ಷಕರಾದ ಅಮರೇಶ್‌ರವರು ಮತ್ತು ಮುರಾರಿ ಎಂಬುವವರು ಹೇಳಿದ್ದರು. ಈ ವಿಷಯವನ್ನು ದೃಢೀಕರಣ ಮಾಡಲು ಮುರಾರಿರವರ ಕಡೆಯಿಂದ ಸಾಕ್ಷಿ ಮಾಡಿಸಲು ತೊಂದರೆ ಇರುವುದಿಲ್ಲ. ನಿಪಿ 5ರ ಮೂಲ ಪ್ರತಿ 7ನೇ ಪ್ರತಿವಾದಿಯ ಮೊದಲು ಶ್ರೀಧರ್ ಮೂರ್ತಿರವರ ಕಡೆ ಇತ್ತು. 2013ರ ಮೊದಲು ನಿಪಿ 5 ರ ಮೂಲ ಪ್ರತಿ 7ನೇ ಪ್ರತಿವಾದಿಯ ಕಡೆ ಇತ್ತು. ನಿಪಿ 5ರ ಮೂಲ ಪ್ರತಿ 7ನೇ ಪ್ರತಿವಾದಿಯ ಕಡೆ ಇದೆ ಎಂದು ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 5ರ ಮೂಲ ಪ್ರತಿ ಮೊದಲಿನಿಂದಲೂ ಶ್ರೀಧರ್ ಮೂರ್ತಿರವರ ಕಡೆ ಇತ್ತು, ಸಾಕ್ಷಿ ಮುಂದುವರೆದು ಶ್ರೀಧರ್ ಮೂರ್ತಿರವರು ತೀರಿಕೊಂಡ ನಂತರ ಅದು 7ನೇ ಪ್ರತಿವಾದಿಯ ಕಡೆ ಇತ್ತು ಎಂದು ಹೇಳುತ್ತಾರೆ. ನಿಪಿ 5ರ ಮೂಲ ಪ್ರತಿಯನ್ನು ಶ್ರೀಧರ್ ಮೂರ್ತಿರವರು ತಮ್ಮ ಕಪಾಟಿನ ಲಾಕರಿನಲ್ಲಿ ಇಟ್ಟುಕೊಂಡಿದ್ದರು.

2006ರಲ್ಲಿ ನನಗೆ ಸ್ವಲ್ಪ ಬುದ್ಧಿ ತಿಳಿಯುವ ವಯಸ್ಸು ಬಂದಿತ್ತು ಎಂದರೆ ನಿಜ. ಶ್ರೀಧರ್ ಮೂರ್ತಿರವರ ಲಾಕರ್ ನ್ನು ಯಾರು ತೆರೆದಿದ್ದರು ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ನಾನು ಅದರ ಬಗ್ಗೆ ಅಮರೇಶ್ ರವರನ್ನು ಹೊರತುಪಡಿಸಿ ಮುರಾರಿ ಮತ್ತು ಶಾಂತಕುಮಾರ್ ರವರ ಕಡೆಯಿಂದ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ 5 ನನ್ನ ಪ್ರಕಾರ ಮಹತ್ವದ ದಾಖಲೆಯಾಗಿರುತ್ತದೆ. ನಿಪಿ 5 ಅಮರೇಶ್ ಹಾಗೂ ಚಂಪಾವತಿಯವರಿಗೂ ಸಹ ಮಹತ್ವದ ದಾಖಲೆ ಎಂದರೆ ನಿಜ. ನಿಪಿ 5 ರ ಮೂಲ ಪ್ರತಿ ಕಳ್ಳತನ ಆಗಿರುತ್ತದೆ ಎಂದು ನಾವು ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೇವಾ ಎಂದರೆ ನಿಪಿ 5 ರ ಮೂಲ ಪ್ರತಿ ಕಳ್ಳತನ ಆಗಿಲ್ಲ ಅದನ್ನು 7ನೇ ಪ್ರತಿವಾದಿ ಖಾತೆ ಬದಲಾವಣೆಗೆಂದು

ತೆಗೆದುಕೊಂಡು ಹೋಗಿದ್ದು ವಾಪಸ್ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಈ ಮೊದಲು ನನ್ನ ಅಜ್ಜ ಅಪ್ರಮೇಯ ಮೂರ್ತಿರವರು ಒ ಎಸ್ ನಂ 9027/2006 ನ್ನು ಹೂಡಿದ್ದು ಅದರಲ್ಲಿ ಚಂಪಾವತಿಯವರು ತಕರಾರು ಸಲ್ಲಿಸಿದ್ದರು ಎಂದರೆ ಆ ದಾವೆಯಲ್ಲಿ ಅಮರೇಶ್ ರವರು ಪಕ್ಷಗಾರರಿದ್ದು ನನ್ನ ಸಂರಕ್ಷಕರಾಗಿ ಚಂಪಾವತಿಯವರು ತಕರಾರು ಸಲ್ಲಿಸಿದ್ದರು ಎಂದು ಹೇಳುತ್ತಾರೆ. ಒ ಎಸ್ ನಂ 9027/2006 ರಲ್ಲಿ ನನ್ನ ತಂದೆ ತಾಯಿಯಾದ ಅಮರೇಶ್ ಹಾಗೂ ಚಂಪಾವತಿ ಇಬ್ಬರು ಪಕ್ಷಗಾರರಿದ್ದರು ಎಂದರೆ ನಿಜ. ಆ ದಾವೆಯಲ್ಲಿ ಅಮರೇಶ್ ಹಾಗೂ ಚಂಪಾವತಿಯವರು ನಿಪಿ 5 ರ ಮೂಲ ಪ್ರತಿ ಕಳ್ಳತನ ಆಗಿರುವ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲ ಎಂದರೆ ನಿಜ. ಸಾಕ್ಷಿಗೆ ಈಗ ವಾದ ಪತ್ರವನ್ನು ತೋರಿಸಲಾಗಿ ಅದರಲ್ಲಿ ನಿಪಿ 5 ರ ಮೂಲ ಪ್ರತಿ ಎಲ್ಲಿದೆ, ಯಾರ ಬಳಿ ಇದೆ ಎಂಬುದರ ಬಗ್ಗೆ ಅಥವಾ ಕಳ್ಳತನದ ಬಗ್ಗೆ ಮಾಹಿತಿ ಇಲ್ಲ ಎಂದರೆ ನಿಜ. ಒ ಎಸ್ ನಂ 9027/2006, 2011 ರಲ್ಲಿ ವಜಾ ಆಗಿರುತ್ತದೆ. ನನ್ನ ಪ್ರಕಾರ ನವೆಂಬರ್, ಡಿಸೆಂಬರ್ 2011 ರಲ್ಲಿ ಅಮರೇಶ್ ಹಾಗೂ ಚಂಪಾವತಿಯವರು 7 ನೇ ಪ್ರತಿವಾದಿಗೆ ನಿಪಿ 5 ರ ಮೂಲ ಪ್ರತಿ ಎಲ್ಲಿದೆ ಎಂದು ಕೇಳಿರುತ್ತಾರೆ ಎಂದರೆ ನಿಪಿ 5 ರ ಜೊತೆ ಬೇರೆ ದಾಖಲೆಗಳು ಸಹ ಎಲ್ಲಿವೆ ಎಂದು ಕೇಳಿದ್ದರು ಎಂದು ಹೇಳುತ್ತಾರೆ. ನನ್ನ ಪ್ರಕಾರ ಮತ್ತು ನಾನು ಪಡೆದ ಮಾಹಿತಿ ಪ್ರಕಾರ 7 ನೇ ಪ್ರತಿವಾದಿ ನಿಪಿ 5 ರ ಮೂಲ ಪ್ರತಿ ಎಲ್ಲೂ ಬರುವುದಿಲ್ಲ ಮತ್ತು ಅದು ನಮ್ಮ ಕಡೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಮೇಲೆ ಹೇಳಿದ ನಿಪಿ 5 ರ ವಿವರಗಳನ್ನು ಅಮರೇಶ್ ಹಾಗೂ ಚಂಪಾವತಿಯವರಿಗೆ ಈ ದಾವೆಯ ವಾದ ಪತ್ರದಲ್ಲಿ ತೋರಿಸಲು ತೊಂದರೆ ಇರಲಿಲ್ಲ.

ಸಾಕ್ಷಿಗೆ ಈಗ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದನ್ನು ತಾವೇ ಸಹಿ ಮಾಡಿರುವುದಾಗಿ ಒಪ್ಪಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಷಯ ಗೊತ್ತಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಯಾವುದೇ ವಿಷಯವನ್ನು ಮುಚ್ಚಿಟ್ಟಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಿಪಿ 5 ರ ಮೂಲ ಪ್ರತಿ ಎಲ್ಲಿ ಹೋಗಿದೆ, ಯಾರ ಬಳಿ ಇದೆ ಮತ್ತು ಅದು ಕಳ್ಳತನವಾಗಿರುವ ಬಗ್ಗೆ ಮಾಹಿತಿ ಕಂಡು ಬರುತ್ತಿಲ್ಲ ಎಂದರೆ ನಿಜ. ನಾನು 2014 ರಲ್ಲಿ ವಯಸ್ಕನಾಗಿರುತ್ತೇನೆ. ನಾನು ಈ ದಾವೆಯನ್ನು ನಡೆಸಲು ಶುರುಮಾಡಿದ ನಂತರ ನಿಪಿ 5 ರ ಮೂಲ ಪ್ರತಿಯನ್ನು ಹಾಜರುಪಡಿಸಲು ಪ್ರಯತ್ನ ಪಟ್ಟಿಲ್ಲ ಮತ್ತು ಅದು ಕಳ್ಳತನ ಆಗಿರುವ ಬಗ್ಗೆ ಮಾಹಿತಿಗಳನ್ನು ಕೊಟ್ಟಿಲ್ಲ ಎಂದರೆ ನಿಜ. ನಾನು ನಿಪಿ 5 ನ್ನು ಓದಿರುತ್ತೇನೆ. ದತ್ತಿನ ಬಗ್ಗೆ ನಮ್ಮ ಜನಾಂಗದ ಕುಲಪದ್ದತಿಯ ಬಗ್ಗೆ ಮಾಹಿತಿ ಇದೆ. ನಿಪಿ 5 ರಲ್ಲಿ ನಮ್ಮ ಜನಾಂಗದ ಕುಲಪದ್ಧತಿಯ ಪ್ರಕಾರ ಎಂದು ಪದ ಬಳಕೆಯಾಗಿದೆ ಎಂದರೆ ನಿಜ. ನಮ್ಮ ಜನಾಂಗದ ದತ್ತು ಪ್ರಕ್ರಿಯೆ ಕುಲಪದ್ದತಿಯ ಬಗ್ಗೆ ತಿಳಿದುಕೊಂಡಿರುತ್ತೇನೆ. ದತ್ತು ಪ್ರಕ್ರಿಯೆಯನ್ನು ದತ್ತು ಪಡೆಯುವ ಹಿಂದಿನ ದಿನ ಒಂದು ಕಾರ್ಯಕ್ರಮವನ್ನು ಮಾಡಿದ್ದು ಆ ಕಾರ್ಯಕ್ರಮ ದಿನಾಂಕಃ 19-04-1996 ರಂದು ಆಗಿರುತ್ತದೆ. ದತ್ತು ಪ್ರಕ್ರಿಯೆ

ದಿನಾಂಕಃ 19-04-1996 ರಲ್ಲಿ ಆಗಿರುತ್ತದೆ. ಸಾಕ್ಷಿಗೆ ಈಗ ನಿಪಿ 5 ರಲ್ಲಿರುವ "ನಮ್ಮ ಅಂತ್ಯ ಕಾಲದಲ್ಲಿ ಉಳಿಯುವ ಎಲ್ಲಾ ಚರಾ ಸ್ಥಿರಾಸ್ತಿಗಳು ಈತನಿಗೆ ಸೇರತಕ್ಕದ್ದು, ಬೇರೆ ಯಾರಿಗೂ ಯಾವ ವಿಧದಲ್ಲೂ ಹಕ್ಕು ಇರುವುದಿಲ್ಲ" ಸಾಲುಗಳನ್ನು ತೋರಿಸಿದ್ದು ಇದನ್ನು ನೋಡಿದರೆ ಅಂತ್ಯಕಾಲದ ಆಸ್ತಿಯ ವ್ಯವಸ್ಥಾಪನೆಯ ಬಗ್ಗೆ ಬರೆಯಲಾಗಿದೆ ಎಂದರೆ ದತ್ತು ಪತ್ರದಲ್ಲಿ ಆ ವಿಷಯವನ್ನು ಸೇರಿಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿ 5 ನ್ನು ಓದಿದರೆ ಅದು ಮೃತ್ಯುಪತ್ರದ ಬಗ್ಗೆ ಕಂಡು ಬರುತ್ತದೆ ಎಂದರೆ ಅದನ್ನು ದತ್ತು ಮತ್ತು ಮೃತ್ಯುಪತ್ರ ಎಂಬುದಾಗಿ ಓದಬಹುದು ಎಂದು ಹೇಳುತ್ತಾರೆ. ನಿಪಿ 5 ಕ್ಕೆ ಯಾರು ಸಾಕ್ಷಿದಾರರು ಇದ್ದರು ಗೊತ್ತಿದೆ. ಅವರು ಗೋವರ್ಧನ್ ಶೆಟ್ಟಿ, ಶ್ರೀನಿವಾಸ್ ಮೂರ್ತಿ, ಟಿ ಟಿ ನಾಗರಾಜ್ ಮತ್ತು ಆಂಜನಪ್ಪ ಶೆಟ್ಟಿ ಸಾಕ್ಷಿದಾರರು ಇದ್ದರು. ಮೇಲೆ ಹೇಳಿದ ಸಾಕ್ಷಿದಾರರಲ್ಲಿ ಶ್ರೀನಿವಾಸ್ ಮೂರ್ತಿ ಹಾಗೂ ಟಿ ಟಿ ನಾಗರಾಜ್ ರವರು ಜೀವಂತವಿದ್ದಾರೆ.

**ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**